**ಸಾಕ್ಷಿಯನ್ನು ದಿಃ 21.03.2025 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

ಕೆಎ-11-ವಿ-7528 ಬೈಕ್ ನನ್ನ ಭಾವನವರಾದ ರಾಜಶೇಖರ್ ರವರಿಗೆ ಸೇರಿದ್ದು. ಸದರಿ ಬೈಕ್ ಗೆ ವಿಮೆ ಚಾಲ್ತಿಯಲ್ಲಿತ್ತು. ಸದರಿ ದಾಖಲೆ ಹಾಜರು ಪಡಿಸಲು ತೊಂದರೆ ಇಲ್ಲ. ಆ ದಿನ ಬೈಕ್ ಅನ್ನು ನಾನೇ ಚಲಾಯಿಸುತ್ತಿದ್ದೆ. ನನಗೆ ಚಾಲನ ಪರವಾನಗಿ ಇದೆ. ಸದರಿ ದಾಖಲೆ ಹಾಜರು ಪಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿಯು ಅಪಘಾತದಲ್ಲಿ ನನ್ನ ಡಿ.ಎಲ್ ಕಳೆದು ಹೋಗಿದೆ ಎಂದು ಉತ್ತರಿಸಿರುತ್ತಾರೆ. ಡಿ.ಎಲ್ ಅನ್ನು ಏಜೆಂಟ್ ರವರಿಂದ ಪಡೆದಿರುತ್ತೇನೆ. ಯಾವ ಆರ್.ಟಿ.ಓ ಕಚೇರಿಯಿಂದ ಪಡೆದಿರುತ್ತೇನೆ ಎಂದು ಗೊತ್ತಿಲ್ಲ. ಸದರಿ ದಾಖಲೆ ಪ್ರತಿಗಳು ನನ್ನ ಬಳಿ ಇರುವುದಿಲ್ಲ. ನನಗೆ ಚಾಲನ ಪರವಾನಗಿ ಇಲ್ಲದೇ ಇರುವ ಕಾರಣ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹುಟ್ಟಿದಾಗಿನಿಂದಲೂ ಮಾರ್ಬಳ್ಳಿ ಗ್ರಾಮದಲ್ಲಿ ವಾಸವಾಗಿದ್ದೇನೆ. ನನಗೆ ಚಾಲನ ಪರವಾನಗಿ ಇಲ್ಲದೇ ಇರುವ ಕಾರಣ ನನಗೆ ಬೈಕ್ ಚಲಾಯಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ ಅಪಘಾತ ನನ್ನ ತಪ್ಪಿನಿಂದ ಅಗಿರುತ್ತದೆ ಎಂದರೆ ಸರಿಯಲ್ಲ.

ನನ್ನ ಹಿಂದೆ ನನ್ನ ಮಾವನ ಮಗ ಸುರೇಶ್ ಹಿಂಬದಿ ಸವಾರನಾಗಿ ಬರುತ್ತಿದ್ದನು. ನಾವು ಆ ದಿನ ಮೈಸೂರು ಕಡೆಯಿಂದ ಮಾರ್ಬಳ್ಳಿ ಕಡೆಗೆ ಹೋಗುತ್ತಿದ್ದೇವು. ಸದರಿ ರಸ್ತೆ ಮೈಸೂರು ಹುಲ್ಲಹಳ್ಳಿ ಮುಖ್ಯ ರಸ್ತೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ಹೆಚ್ಚು ವಾಹನ ಸಂಚಾರ ಇರುತ್ತದೆ ಎಂದರೆ ಸರಿ. ಸದರಿ ರಸ್ತೆ 40 ಅಡಿ ಅಗಲದ ದೊಡ್ಡ ರಸ್ತೆ ಎಂದರೆ ಸರಿ. ಗೂಡ್ಸ್ ವಾಹನ ಬರುವುದನ್ನು ಎಷ್ಟು ದೂರದಿಂದ ನೋಡಿರುತ್ತೇನೆ ಎಂದರೆ ಸಾಕ್ಷಿಯು ತಿರುವಿನಲ್ಲಿ ಬಂದ ಕಾರಣ ನಾನು ವಾಹನವನ್ನು ನೋಡಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಗೂಡ್ಸ್ ವಾಹನ ಚಾಲಕನು ತನ್ನ ಭಾಗದ 90% ರಸ್ತೆಯನ್ನು ಕ್ರಾಸ್ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಸದರಿ ವಾಹನ ಬರುವುದನ್ನು ಗಮನಿಸದೇ ನಾನೇ ಹೋಗಿ ಗೂಡ್ಸ್ ವಾಹನಕ್ಕೆ ಡಿಕ್ಕಿ ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಗೂಡ್ಸ್ ವಾಹನ ಚಾಲಕನು ಸೂಚನೆ ಹಾಕಿಕೊಂಡು ರಸ್ತೆ ನಿಯಮವನ್ನು ಪಾಲಿಸಿಕೊಂಡು ಬರುತ್ತಿದ್ದನು ಎಂದರೆ ಸರಿಯಲ್ಲ. ಅಪಘಾತವು ಸಂಜೆ 07.30 ರಿಂದ 7.45

ಗಂಟೆಯಲ್ಲಿ ಆಗಿರುತ್ತದೆ. ನಾನು ಮತ್ತು ಸುರೇಶ ಮಾತನಾಡಿಕೊಂಡು ಎದುರುಗಡೆ ಬರುತ್ತಿರುವ ವಾಹನವನ್ನು ಗಮನಿಸದೇ ರಸ್ತೆಯ ಮೇಲೆ ನಿಗಾ ಇಲ್ಲದೇ ಹೋಗಿ ಗೂಡ್ಸ್ ವಾಹನಕ್ಕೆ ಡಿಕ್ಕಿ ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಸ್ಥಳ ನಕ್ಷೆ ಪ್ರಕಾರ ಗೂಡ್ಸ್ ವಾಹನ ಚಾಲಕನು ತನ್ನ ಭಾಗದ 90% ರಸ್ತೆಯನ್ನು ದಾಟಿರುತ್ತಾನೆ ಎಂದರೆ ಸರಿಯಲ್ಲ. ನಾವಿಬ್ಬರು ಆ ದಿನ ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸರಿಯಲ್ಲ. ಪೋಲೀಸರು ಸ್ಥಳ ಮಹಜರ್ ನಲ್ಲಿ ಹೆಲ್ಮೆಟ್ ವಶಪಡಿಸಿಕೊಂಡ ಬಗ್ಗೆ ನಮೂದು ಮಾಡದೇ ಇರುವ ಕಾರಣ ನಾವು ಆ ದಿನ ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸರಿಯಲ್ಲ.

ಅಪಘಾತದಲ್ಲಿ ನನ್ನ ಬಲಕೈ ಮತ್ತು ಎಡಕಿವಿಗೆ  ಏಟಾಗಿರುತ್ತದೆ. ಅಪಘಾತ ಆದ ತಕ್ಷಣ ಆಸ್ಪತ್ರೆಗೆ ನನ್ನ ಸ್ನೇಹಿತ ರಾಜೇಶ, ನನ್ನ ತಮ್ಮ ಸಂತೋಷ್, ನನ್ನ ಅಣ್ಣ ಸೂರಜ್ ಇವರು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಮೊದಲಿಗೆ ಕೆ.ಆರ್. ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಪಡೆದುಕೊಂಡು ಅಲ್ಲಿಂದ ಕೆ.ವಿ.ಸಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಆಸ್ಪತ್ರೆಗೆ ಬಂದು ಪೋಲೀಸರು ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ. ಆಸ್ಪತ್ರೆಯಲ್ಲಿ ಒಂದು ವಾರ ದಾಖಲಾಗಿದ್ದೆ. ಬಲಗೈ ಗೆ ಶಸ್ತ್ರ ಚಿಕಿತ್ಸೆ ಮಾಡಿ ರಾಡ್ ಹಾಕಿರುತ್ತಾರೆ ಆನಂತರ ತೆಗೆದಿರುತ್ತಾರೆ. ಕಿವಿಗೆ ಹೊಲಿಗೆ ಹಾಕಿರುತ್ತಾರೆ. ಈಗ ನಾನು ಮೊದಲಿನಂತೆಯೇ ಕೆಲಸ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಕೈ ಎತ್ತಲು ಆಗುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಔಷಧಿ ಪಾವತಿ ರಶೀದಿಗಳನ್ನು ಪರಿಹಾರಕಾಕಗಿ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಔಷಧಿ ಪಾವತಿ ರಶೀದಿಗಳಿಗೆ ಪೂರಕವಾದ ಸಲಹಾ ಚೀಟಿಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ಹಾಜರು ಪಡಿಸಿರುತ್ತೇನೆ ಎಂದು ಉತ್ತರಿಸಿರುತ್ತಾರೆ.

ನಾನು ಗಾರೆ ಕೆಲಸ ಮಾಡುತ್ತಿದ್ದೆ. ನಾನು ಕೆಲಸ ಮುಗಿಸಿಕೊಂಡು ಮನೆಗೆ ಹೋಗಲು ಸಂಜೆ 07.30 ಗಂಟೆ ಆಗಿರುತ್ತದೆ. ನಾನು ಗಾರೆ ಕೆಲಸ ಬಿಟ್ಟು ಬೇರೆ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸಾಕ್ಷಿಯು ಭಾನುವಾರ ಹೊಲಕ್ಕೆ ವ್ಯವಸಾಯ ಮಾಡುತ್ತಿದ್ದೆ ಎಂದು ಉತ್ತರಿಸಿರುತ್ತಾರೆ. ಹೈನುಗಾರಿಕೆ ಮತ್ತು ವ್ಯವಸಾಯದಿಂದ 20,000/- ರುಪಾಯಿ ಸಂಪಾದನೆ ಮಾಡುತ್ತಿದ್ದೆ ಎಂದು ತೋರಿಸಲು ದಾಖಲೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ನಾನು ಆ ಬಗ್ಗೆ ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಇನ್ನೂ ಸಣ್ಣ ವಯಸ್ಸಾದ್ದ ಕಾರಣ ನಾನು ಕೆಲಸ ಮಾಡಲು ಶಕ್ತನು ಎಂದರೆ ಸರಿಯಲ್ಲ. ಅಪಘಾತವು ಪ್ರಶ್ನಿತ ವಾಹನ ಚಾಲಕನಿಂದ ಆಗದೇ ಇರುವ ಕಾರಣ 3 ನೇ ಎದುರುದಾರರು ಪರಿಹಾರ ನೀಡಲು ಬರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.